ಅಸಲು ದಾವಾ ಸಂ.88/2019

ಪಿ .ಡಬ್ಲ್ಯೂ-1

ದಿನಾಂಕ 23-10-2024 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

**ಪಾಟೀಸವಾಲುಃ ಪ್ರತಿವಾದಿಯರ ಪರ ಶ್ರೀ ಎ ಜೆ ವಿ ವಕೀಲರಿಂದಃ-**

1 ನೇ ಪ್ರತಿವಾದಿ ನನ್ನ ವಿರುದ್ದ ವಿಚ್ಛೇದನೆ ಕೋರಿ ದಾವೆಯನ್ನು ಮಾನ್ಯ ಹಿರಿಯ ದಿವಾಣಿ ನ್ಯಾಯಾಲಯ ಬನಹಟ್ಟಿಯಲ್ಲಿ ದಾಖಲ ಮಾಡಿದ್ದರು ಎಂದರೆ ಸರಿ . ಸದರಿ ದಾವೆಯಲ್ಲಿ ನಾನು ಹಾಜರಾಗಿ ತಕರಾರನ್ನು ಕೊಟ್ಟಿರುತ್ತೇನೆ ಎಂದರೆ ಸರಿ . ಅದರಲ್ಲಿ ವಿಚ್ಛೇದನದ ಆದೇಶ ಆಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದರ ಮೇಲ್ಮನವಿಯನ್ನು ನಾನು ಸಲ್ಲಿಸಿರುತ್ತೇನೆ. ಅಪೀಲನಲ್ಲಿ ಏನಾಗಿರುತ್ತದೆ ಎಂದು ನನಗೆ ಮಾಹಿತಿ ಇರುವದಿಲ್ಲ.

ಈ ದಾವೆ ದಾಖಲಿಸುವ ಮೊದಲು ನಾನು ಬೇರೆಯವರ ಮನೆಯಲ್ಲಿ ಮನೆ ಕೆಲಸ ಮಾಡುತ್ತಿದ್ದೇನು. ತಿಂಗಳಿಗೆ ರೂ 400 ಅಂತಾ ಕೊಡುತ್ತಿದ್ದರು. ಅವರ ಹೆಸರು ನನಗೆ ಹೇಳಲು ಬರುವದಿಲ್ಲ. ನನ್ನ ಮಾವನ ಹೆಸರು ಶಾಮರಾಮ ಅಂತಾ ಇದ್ದು ಅವರ ತಂದೆಯ ಹೆಸರು ನನಗೆ ಗೊತ್ತಿರುವದಿಲ್ಲ. ನನ್ನ ಮಾವ ಸುಮಾರು 15 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ನನ್ನ ಅತ್ತೆ ಈ ದಾವೆಯ 7 ನೇ ಪ್ರತಿವಾದಿ ಇರುತ್ತಾರೆ. ಅವರಿಗೆ 04 ಜನ ಮಕ್ಕಳು ಇದ್ದು ಅವರ ಹೆಸರುಗಳು ಲಕ್ಷ್ಮೀ , ವಿಜಯಕಲಾ, ರಾಘವೆಂದ್ರ ಮತ್ತು ಗೋಪಾಲ ಅಂತಾ ಇರುತ್ತದೆ. ಅವರಲ್ಲಿ ಗೋಪಾಲ ಇವರು ಅಂದಾಜು 07-08 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ಆತನಿಗೆ ಕವಿತಾ ಎಂಬ ಹೆಂಡತಿ ಇದ್ದು ರಿಷಿತಾ ಮತ್ತು ಸಮರ್ಥ ಎಂಬ ಇಬ್ಬರು ಮಕ್ಕಳು ಇರುತ್ತಾರೆ. ಅವರನ್ನು ಈ ದಾವೆಯಲ್ಲಿ ಪಾರ್ಟಿ ಮಾಡಿರುತ್ತೇನೆ. ನನ್ನ ಮಾವನ ಇಬ್ಬರು ಹೆಣ್ಣು ಮಕ್ಕಳನ್ನು ಈ ದಾವೆಯಲ್ಲಿ ಪಾರ್ಟಿ ಮಾಡಿರುವದಿಲ್ಲ ಕಾರಣ ಅವರು ಆಸ್ತಿಯಲ್ಲಿ ಪಾಲು ಬೇಡ ಎಂದು ಹೇಳಿರುತ್ತಾರೆ. ಹಾಗೆಂದು ಲಿಖಿತವಾಗಿ ಕೊಟ್ಟಿರುವದಿಲ್ಲ. ಲಕ್ಷ್ಮೀ ಇವರು ನಿಪ್ಪಾಣಿಯಲ್ಲಿ ವಾಸ ಇದ್ದು, ವಿಜಯಕಲಾ ಇವರು ದೇವಾಸೂರ ದಲ್ಲಿ ವಾಸ ಇರುತ್ತಾರೆ. ಅವರಿಗೆ ದಾವಾ ಆಸ್ತಿಯಲ್ಲಿ ಪಾಲು ಕೊಡಬೇಕಾಗುತ್ತದೆ ಎಂದು ಉದ್ದೇಶಪೂರ್ಕವಾಗಿ ಪಾರ್ಟಿ ಮಾಡಿರುವದಿಲ್ಲ ಎಂದರೆ ಸರಿಯಲ್ಲ. ನನಗೆ 03 ಜನ ಮಕ್ಕಳು ಇದ್ದು ಅವರ ಹೆಸರು ಶ್ರೇಯಾ, ವಿನಯ ಮತ್ತು ಪೂಜಾ ಅಂತಾ ಇರುತ್ತಾರೆ. ದಾವೆಯ ಜೊತೆ ವಂಶಾವಳಿಯನ್ನು ಕೊಟ್ಟಿರುತ್ತೇನೆ. ನನಗೆ ಕನ್ನಡ ಭಾಷೆ ಓದಲು ಬರುವದಿಲ್ಲ. ನಾನು ಶಾಲೆ ಕಲಿತಿರುವದಿಲ್ಲ. ನನ್ನ ಮಾವ ಮರಣ ಹೊಂದಿದ ನಂತರ ಎಲ್ಲರೂ ರಾಂಪೂರದಲ್ಲಿ ವಾಸ ಇರುತ್ತಾರೆ ಎಂದರೆ ಸರಿ. ಪ್ರತಿವಾದಿಯರು ಹಾಕಿದ ತಕರಾರು ಮತ್ತು ಹಾಜರು ಪಡಿಸಿರುವ ದಾಖಲೆಗಳನ್ನು ನಾನು ನೋಡಿರುವದಿಲ್ಲ. ನನ್ನ ವಕೀಲರು ಸಹ ಅದರ ಮಾಹಿತಿಯನ್ನು ಕೊಟ್ಟಿರುವದಿಲ್ಲ. ದಾವಾ ಆಸ್ತಿಯ ನಂಬರ ನನಗೆ ಹೇಳಲು ಬರುವದಿಲ್ಲ. ನಾನು ಹಾಜರು ಪಡಿಸಿರುವ ದಾಖಲೆಗಳಂತೆ ದಾವಾ ಆಸ್ತಿ ಅನುಕ್ರಮ ನಂಬರ 1 ನನ್ನ ಗಂಡನ ಹೆಸರಿನಲ್ಲಿ ಇದ್ದು ಎರಡನೇ ಕ್ರಮಾಂಕದಲ್ಲಿ ತೋರಿಸಿದ ಆಸ್ತಿ ನನ್ನ ಅತ್ತೆಯ ಹೆಸರಿನಲ್ಲಿ ಇದ್ದು 3 ನೇ ಕ್ರಮಾಂಕದ ಆಸ್ತಿ ಪ್ರತಿವಾದಿ ನಂಬರ 4 ರಿಂದ 6 ರವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ನಿಪಿ-2 ರ ಆಸ್ತಿ ಮಾತ್ರ ನನ್ನ ಗಂಡನ ಹೆಸರಿನಲ್ಲಿ ಇದೆ ಎಂದರೆ ಸರಿ. ದಾವೆ ದಾಖಲ ಮಾಡುವ ಕಾಲಕ್ಕೆ ಉತಾರಗಳನ್ನು ತೆಗೆದುಕೊಂಡು ಹಾಜರು ಪಡಿಸಿದ್ದೇನೆ ಎಂದರೆ ಅದರ ಮಾಹಿತಿ

ಇರುವದಿಲ್ಲ. ನನ್ನ ವಕೀಲರೇ ಮಾಡಿರುತ್ತಾರೆ. ದಾವೆಯಲ್ಲಿ ನನ್ನ ವಕೀಲರು ಹಾಜರು ಪಡಿಸಿರುವ ದಾಖಲೆಗಳ ಸಂಪೂರ್ಣ ಮಾಹಿತಿ ನನಗೆ ಇರುವದಿಲ್ಲ ಎಂದರೆ ಸರಿ. ಈ ದಾವೆ ದಾಖಲಿಸುವ ಮೊದಲು ಆಸ್ತಿ ಅನುಕ್ರಮ ನಂ.1 ರಿಂದ 3 ಕ್ಕೆ ಅದರಲ್ಲಿರುವ ನಮೂದಿಸಿರುವ ಹೆಸರುಗಳು ಪ್ರತ್ಯೇಕವಾಗಿ ದಾಖಲ ಆಗಿರುತ್ತದೆ ಎಂದರೆ ಸರಿಯಲ್ಲ. ಈ ದಾವೆ ದಾಖಲ ಮಾಡಿದ ನಂತರ 03 ಭಾಗ ಅಂತಾ ಮಾಡಿಕೊಂಡಿರುತ್ತಾರೆ. ದಾವೆಯ ಮೊದಲು ಅವರ ನಡುವೆ ಪಾಲು ವಾಟ್ನಿಯಾಗಿ ಪ್ರತ್ಯೇಕವಾಗಿ ಹೆಸರನ್ನು ಉತಾರದಲ್ಲಿ ನಮೂದಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-1 ರ ಆಸ್ತಿ ನನ್ನ ಅತ್ತೆಯ ಸ್ವಂತ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. ಹಾಗೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅವರು ದಿನಾಂಕ 06-07-2018 ರಂದು ಯಾಸೀನ ಕಾಲಬಾರಿ ಇವರಿಂದ ಖರೀದಿ ಮಾಡಿದ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. ನನ್ನ ಅತ್ತೆಯ ಸ್ವಂತ ಆಸ್ತಿಯಲ್ಲಿ ನನಗಾಗಲೀ, ನನ್ನ ಗಂಡನಿಗಾಗಲೀ ಮತ್ತು ಆತನ ಸಹೋದರರ ಸಹೋದರಿಯರಿಗೆ ಯಾವುದೇ ಪಾಲು ಇರುವದಿಲ್ಲ ಎಂದರೆ ಸರಿಯಲ್ಲ. 1 ನೇ ಎದುರುದಾರನೊಂದಿಗೆ ನನ್ನ ವಿವಾಹ ವಿಚ್ಛೇದನೆ ಆಗಿರುವ ಕಾರಣ ನನ್ನ ಗಂಡನ ಆಸ್ತಿಯಲ್ಲಿ ಪಾಲು ಕೇಳಲು ಬರುವದಿಲ್ಲ ಎಂದರೆ ಸರಿಯಲ್ಲ.

ನನ್ನ ಮಾವ ಮರಣ ಹೊಂದಿದ ನಂತರ ಅತನ ಇಬ್ಬರು ಗಂಡು ಮಕ್ಕಳು ಆಸ್ತಿಯಲ್ಲಿ ವಾಟ್ನಿ ಮಾಡಿಕೊಂಡು ತಮ್ಮ ಹೆಸರನ್ನು ಪ್ರತ್ಯೇಕವಾಗಿ ನಮೂದು ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿರುವದಿಲ್ಲ. 1 ನೇ ಪ್ರತಿವಾದಿ ತಳ್ಳುವಗಾಡಿಯಲ್ಲಿ ಹೋಟೇಲ ನಡೆಸುತ್ತಿದ್ದರು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಗೆ ಎಷ್ಟು ವಯಸ್ಸಾಗಿರುತ್ತದೆ ಎಂದು ನನಗೆ ಹೇಳಲು ಬರುವದಿಲ್ಲ. 2 ನೇ ವಾದಿಯನ್ನು ಹೊರತು ಪಡಿಸಿ ನನ್ನ ಇಬ್ಬರು ಮಕ್ಕಳು 1 ನೇ ಪ್ರತಿವಾದಿಯೊಂದಿಗೆ ವಾಸ ಇರುತ್ತಾರೆ ಎಂದರೆ ಸರಿ. ನಾನು 1 ನೇ ಪ್ರತಿವಾದಿ ನಡೆಸುತ್ತಿದ್ದ ಹೋಟೇಲ ಹತ್ತಿರ ಗಲಾಟೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಇಬ್ಬರು ಮಕ್ಕಳ ಶಿಕ್ಷಣದ ಬಗ್ಗೆ ನನಗೆ ಗೊತ್ತಿರುವದಿಲ್ಲ.

7 ನೇ ಪ್ರತಿವಾದಿ ತನ್ನ ಆಸ್ತಿಯನ್ನು ಬಾಡಿಗೆಗೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ದಾವೆ ಮಾಡುವ ಕಾಲಕ್ಕೆ ನಾನು ಬೇರೆ ವಾಸ ಇದ್ದೇನು. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇಲ್ಲದೇ ಇದ್ದರೂ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 1 ನೇ ಪ್ರತಿವಾದಿ ತನ್ನ ಮಗಳಿಗೆ ಕಾನೂನು ಬದ್ದವಾಗಿ ಪಾಲು ಕೊಡಲು ಸಿದ್ದನಿದ್ದರೂ ಸಹ ಪ್ರತಿವಾದಿಯರನ್ನು ಕಾಡಲು ಸುಳ್ಳು ಹೂಡಿರುತ್ತೇನೆ ಎಂದರೆ ಸರಿಯಲ್ಲ.

<u>**ಮರು ವಿಚಾರಣೆಃ- ಇಲ್ಲಾ .**</u>

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ. ಕೇ. ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ., ಬನಹಟ್ಟಿ.